PCR.4435/2024
CW1.

**ಸಾಕ್ಷಿಯನ್ನು ದಿನಾಂಕಃ 05.03.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಆರ್.ಎನ್. ವಕೀಲರಿಂದಃ**

ಪಿರ್ಯಾದಿಯನ್ನು ಅನಾರೋಗ್ಯ ಕಾರಣದಿಂದ ತಡವಾಗಿ ಹಾಜರುಪಡಿಸಿರುತ್ತೇನೆ ಎಂದು ಹೇಳುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಕೊಡುತ್ತೇನೆ. ನನಗೆ ಶುಗರ್ ಇದ್ದು, ಶುಗರ್ ನಿಂದ ಬಿಪಿ ರೈಸ್ ಆಗಿರುತ್ತದೆ. ಬಿಪಿ ಇಂದ ಕಿಡ್ನಿಗೆ ತೊದಂರೆ ಆಗಿ ಆ ಬಗ್ಗೆ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದೆನು. ಮಾರ್ಚ್ 2022ರಿಂದ ತೊಂದರೆ ಆಗಿರುತ್ತದೆ. ನಾನು ಎಸ್.ಕೆ.ಲೆದರ್ಸ್ ಶೂ ಅಂಗಡಿಯನ್ನು ಇಟ್ಟು ಕೊಂಡಿರುತ್ತೇನೆ. ಎಸ್.ಕೆ.ಲೆದರ್ಸ್ ಶೂ ಅಂಗಡಿಯನ್ನು ನಾನೇ ಬೆಳಿಗ್ಗೆಯಿಂದ ಸಂಜೆಯವರೆಗೂ ನೋಡಿಕೊಳ್ಳುತ್ತಿದ್ದೇನೆ ಎಂದರೆ ನಾನು ಹೋಗಿ ವ್ಯವಹಾರವನ್ನು ನೋಡಿ ಬರುತ್ತೇನೆ. ಕೆಲವೊಮ್ಮೆ ಅಂಗಡಿಗೆ ಹೋಗುತ್ತೇನೆ, ಹೆಚ್ಚಾಗಿ ನಾನು ಅಂಗಡಿಗೆ ಪ್ರತಿ ದಿನ ಹೋಗುತ್ತೇನೆ, ಕೆಲವೊಮ್ಮೆ ಅಂಗಡಿಗೆ ಹೋಗುವುದಿಲ್ಲ. ಅಂಗಡಿಗೆ ಹೋದರೆ ಸಾಮಾನ್ಯವಾಗಿ 2-3 ಗಂಟೆಗಳ ಕಾಲ ಇರುತ್ತೇನೆ ಎಂದರೆ ಕೆಲವೊಮ್ಮೆ ಅರ್ಧ ಗಂಟೆ ಮಾತ್ರ ಇರುತ್ತೇನೆ. ಹುಷಾರಿಲ್ಲದ ಕಾರಣ ದೂರನ್ನು ತಡವಾಗಿ ದಾಖಲಿರುತ್ತೇನೆ ಎಂದು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೀಗಾಗಿ ನಾನು ಒಳರೋಗಿಯಾಗಿ ದಾಖಲಾಗಿದ್ದೆನು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ಚೆಕ್ ಅಮಾನ್ಯಗೊಂಡ ನಂತರ ಆರೋಪಿತರು ಹಣವನ್ನು ಕೊಡುತ್ತೇನೆ ಎಂದು ಮನವಿ ಮಾಡಿಕೊಂಡಿದ್ದ ಕಾರಣ ನಾನು ತಡವಾಗಿ ನೋಟೀಸ್ ಅನ್ನು ನೀಡಿರುತ್ತೇನೆ. ಚೆಕ್ ಮಾರ್ಚ್‌ನಲ್ಲಿ ಅಮಾನ್ಯಗೊಂಡಿರುತ್ತದೆ, ನಾನು ಮೇ ತಿಂಗಳಿನಲ್ಲಿ ನೋಟೀಸ್ ಅನ್ನು ಕೊಟ್ಟಿರುತ್ತೇನೆ. ಚೆಕ್ ಅಮಾನ್ಯಗೊಂಡ 2 ತಿಂಗಳುಗಳ ನಂತರ ಆರೋಪಿತರಿಗೆ ನೋಟೀಸ್ ಅನ್ನು ಕಳುಹಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿತರು ಹಣ ಕೊಡುತ್ತೇನೆ ಎಂದು ಮನವಿ ಮಾಡಿಕೊಂಡ ಕಾರಣ ತಡವಾಗಿ ನೋಟೀಸ್ ಅನ್ನು ಕೊಟ್ಟಿರುತ್ತಾರೆ. ಆರೋಪಿತರು ಮನವಿ ಮಾಡಿಕೊಂಡಿರುತ್ತಾರೆ ಎಂದು

ಹೇಳುವ ಬಗ್ಗೆ ದಾಖಲೆ ಇದೆಯೇ ಎಂದರೆ ಆರೋಪಿತರು ಮೌಖಿಕವಾಗಿ ಕೇಳಿಕೊಂಡಿರುತ್ತಾರೆ. ಆರೋಪಿತರು ನನ್ನ ಬಳಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ದೂರನ್ನು ಆರೋಪಿತರು ಕೆಲಸ ಬಿಟ್ಟ ನಂತರ ದಾಖಲಿಸಿರುತ್ತೇನೆ ಎಂದರೆ ಕೆಲಸ ಬಿಟ್ಟ ನಂತರ ಆರೋಪಿತರು ಚೆಕ್ ಅನ್ನು ಕೊಟ್ಟಿರುತ್ತಾರೆ. ಆರೋಪಿತರು ನನ್ನ ಬಳಿ ಕೆಲಸಕ್ಕೆ ಇದ್ದಾಗ ಅವರಿಂದ ಅವರ ಎಲ್ಲಾ ಬಯೋ-ಡೇಟಾವನ್ನು, ಆನ್ ಡಿಮ್ಯಾಂಡ್ ಮತ್ತು ಚೆಕ್ ಅನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಣ ಕೊಡಬೇಕಾಗಿರದ ಕಾರಣ ಆರೋಪಿತರಿಂದ ಪಡೆದುಕೊಂಡ ಚೆಕ್ಕುಗಳನ್ನು ದುರ್ಬಳಕೆ ಮಾಡಿಕೊಂಡು ತಾವು ತಡವಾಗಿ ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

3. ಆರೋಪಿತರಿಗೆ ನಾನು ಯಾವ ದಿನ ನೋಟೀಸ್ ಅನ್ನು ಕೊಟ್ಟಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ಯಾವ ದಿನ ದೂರನ್ನು ದಾಖಲು ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಈ ಪ್ರಕರಣದ ಕುರಿತು ಯಾವುದೇ ಅಂಶ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು 34 ದಿನಗಳ ಕಾಲ ತಡವಾಗಿ ದೂರನ್ನು ದಾಖಲಿಸಿರುತ್ತೀರಿ ಎಂದರೆ ಆಗಿರಬಹುದು. ಎಲ್ಲಾ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ತಡವಾಗಿ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೆ.ಕೇ.ಸ.ಇ

**4ನೇ ಎಎಸ್‌ಸಿಜೆ ಮತ್ತು ಎಸಿಎಂಎಂ**
**ಬೆಂಗಳೂರು**